ಹೊಸ ಚೈನ್ ಮತ್ತು ಅತ್ಯಾಧುನಿಕ ವಿನ್ಯಾಸದ ಲಾಕೆಟ್ ತೂಗುತ್ತಿದೆ. ಲೆಕ್ಕವಿಲ್ಲದಷ್ಟು ಕೈ ಬಳೆಗಳು ಎರಡೂ ಕೈಗಳಲ್ಲಿ ಫಳ ಫಳನೆ ಹೊಳೆಯುತ್ತಿವೆ. ಅದೃಷ್ಟ ಅಂದರೆ ಇದು. ಸಾಲಿಹಾ ಮನಸ್ಸಿನಲ್ಲೇ ಅಂದುಕೊಂಡಳು.

ಸರಸರನೆ ಖರ್ಜೂರಗಳು ಮತ್ತು ಬಾದಾಮಿ ಪಿಸ್ತಾಗಳನ್ನು ಒಂದು ಸಾಸರಿಗೆ ಹಾಕಿ ಅವಳ ಮುಂದೆ ಇಟ್ಟಳು ಮತ್ತು ಮಂಚದ ಅಡಿಯಿಂದ ಒಂದು ಬಾಕ್ಸ್ ಅನ್ನು ಎಳೆದು ಅದರಿಂದ ಬೆಡ್ ಶೀಟ್‌ನ ಒಂದು ಪ್ಲಾಸ್ಟಿಕ್ ಕವರನ್ನು ತೆಗೆದಿಟ್ಟಳು. ತೆಳು ಗುಲಾಬಿ ಬಣ್ಣದ ಉತ್ಕೃಷ್ಟ ಹತ್ತಿ ಮತ್ತು ಉದ್ದಕ್ಕೂ ಅತ್ಯಾಕರ್ಷಕ ಫ್ರಿಲ್ ಮತ್ತು ಲೇಸ್‌ಗಳಿಂದ ಕೂಡಿದ ಆ ಬೆಡ್ ಸ್ಪ್ರೆಡ್ ಸೆಟ್ಟನ್ನು ಕಂಡು ಅವಳ ಮನಸ್ಸು ಆನಂದದಿಂದ ಸಂಭ್ರಮಿಸಿತು. ನವಿರಾಗಿ ಅದರ ಮೇಲೆ ಕೈಯಾಡಿಸಿದಾಗ ಅವಳ ಮೈ ಜುಮ್ಮೆಂದಿತು. ಬೆಡ್ ಶೀಟ್ ದಿಂಬಿನ ಕವರ್‌ಗಳು ಮತ್ತು ಅದೇ ವಿನ್ಯಾಸದ ಹೊದಿಕೆ ಸೇರಿದಂತೆ ದೊಡ್ಡ ಪ್ಯಾಕೆಟ್ ಆಗಿದ್ದರೂ ಅದು ಹಗುರವಾಗಿತ್ತು. ಎರಡೂ ಕೈಗಳಲ್ಲಿ ಹಿಡಿದು ಪಕ್ಕಕ್ಕೆ ಇರಿಸಿಕೊಂಡು ಅವಳು ಇನ್ನೊಂದು ಸೆಟ್ ಎಲ್ಲಿ? ಎನ್ನುವಂತೆ ಇಮ್ರಾನಾಳತ್ತ ನೋಟ ಹಾಯಿಸಿದಳು. ಇಮ್ರಾನಾ ಮಂಚದ ಮೇಲೆ ಕುಳಿತು, ''ಸಾಲಿಹಾ ಆಪ, ನೀವು ಬರುವುದಕ್ಕೆ ಹತ್ತು ನಿಮಿಷ ಮುಂಚಿತವಾಗಿ ರಾಹತ್ ಚಿಕ್ಕಮ್ಮ ಬಂದಿದ್ದರು. ಅವರು ಇದನ್ನು ನೋಡಿದ ಕೂಡಲೇ ಬಿಡದೆ ತಮ್ಮ ಮೊಮ್ಮಗಳ ಸಲುವಾಗಿ ತೆಗೆದುಕೊಂಡು ಹೋದರು".

ಸಾಲಿಹಾಗೆ ಅಪಾರ ನಿರಾಶೆಯಾಯಿತು. ಏರು ಧ್ವನಿಯಲ್ಲಿ ಕೇಳಿದಳು, ''ನಾನು ಎರಡು ಸೆಟ್‌ಗೆ ಅಲ್ಲವಾ ನಿನಗೆ ಹೇಳಿದ್ದು? ನಾನು ಯಾವತ್ತಾದರೂ ನಿನ್ನ ದುಡ್ಡು ತಿಂದಿದೀನಾ? ಯಾಕೆ ಹೀಗೆ ಮಾಡಿದೆ?'' ಎಂದು ದುಃಖಿತಳಾಗಿ ಕೇಳಿದಳು. ಅವಳ ಈ ಚರ್ಯೆಯನ್ನು ಕಂಡು ಇಮ್ರನಾಗೆ ಆಶ್ಚರ್ಯವಾಯಿತು.

''ಬಿಡಿ ಅಕ್ಕ. ಆಗಬಾರದ್ದು ಏನು ಆಗಿಲ್ಲಾ. ಮುಂದಿನ ತಿಂಗಳು ನನ್ನ ತಂಗಿ ದುಬೈನಿಂದ ಬರ್ತಾಳೆ. ಈ ತಿಂಗಳ ಕೊನೆಯಲ್ಲಿ ಅಲ್ಲಿ ಸೇಲ್ ಬೇರೆ ಇದೆ. ಇದೇ ತರಹ ಸೆಟ್ಟನ್ನು ನಿಮಗೆ ಇನ್ನೂ ಕಡಿಮೆ ಬೆಲೆಯಲ್ಲಿ ತರಿಸಿಕೊಡುವ ಜವಾಬ್ದಾರಿ ನನ್ನದು. ಹಿರಿಮಗಳ ಮದುವೆ ಮಾಡಿದ ಮೇಲೆ ತಾನೇ ಕಿರಿಯವಳದ್ದು. ಅದಕ್ಕೆ ಯಾಕೆ ಅರ್ಜೆಂಟ್ ಮಾಡ್ತೀರಿ?'' ಎಂದು ಸಮಾಧಾನವಾಗಿಯೇ ಹೇಳಿದಳು. ಆದರೆ ಸಾಲಿಹಾಳ ಕೋಪ ಮಾತ್ರ ತಣಿದಿರಲಿಲ್ಲ. ನಾನು ಯಾವಾಗ ಬೇಕಾದರೂ ನನ್ನ ಮಕ್ಕಳ ಮದುವೆ ಮಾಡ್ತೀನಿ. ಇವಳಿಗೆ ಯಾಕೆ ಉಸಾಬರಿ ಎಂಬ ಧೋರಣೆ ಬೇರೆ ಮೂಡಿತು. ಒಂದು ಸೆಟ್‌ನ ಹಣವನ್ನೇ ಕೂಡಿಸಲು ಅವಳು ಇನ್ನಿಲ್ಲದ ಕಸರತ್ತನ್ನು ಮಾಡಬೇಕಿತ್ತು. ಹೀಗಾಗಿ ಅವಳು ತರಾತುರಿಯಲ್ಲಿ ಆ ಸೆಟ್ಟನ್ನು ಹೊತ್ತುಕೊಂಡು ಇಮ್ರಾನಾಳ ಮನೆಯಿಂದ ಹೊರನಡೆದಳು.

ಆ ಉರಿ ಬಿಸಿಲಿನಲ್ಲಿ ನಡೆಯುವುದಕ್ಕಿಂತ ಆಟೊದಲ್ಲಿ ಹೋಗುವುದೇ ಸೂಕ್ತ ಎಂದು ಅವಳಿಗೆ ಅನ್ನಿಸಿತು. ಆದರೆ ಒಂದೊಂದು ಪೈಸೆಯನ್ನು ಕೂಡ ಹಿಡಿತದಿಂದ ಖರ್ಚು ಮಾಡುತ್ತಿದ್ದ ಅವಳು ಆಟೊಗೆ ಕೊಡುವ ಹಣವನ್ನು ಕೂಡ ಉಳಿಸಬೇಕೆಂದು ನಿರ್ಧರಿಸಿ ಲಗೇಜನ್ನು ಎಡ ಕೈಯಿಂದ ಬಲಗೈಗೆ, ಬಲಗೈಯಿಂದ ಎಡಗೈಗೆ ಬದಲಾಯಿಸುತ್ತ ನಡೆಯತೊಡಗಿದಳು. ಒಂದಿಷ್ಟು ದೂರ ನಡೆಯುವಷ್ಟರಲ್ಲಿ ಅವಳ ಕೈ ಕಾಲುಗಳು ಸೋಲತೊಡಗಿದವು. ಹಣೆಯ ಮೇಲೆ ಬೆವರು ತೊಟ್ಟಿಕ್ಕತೊಡಗಿತು. ನಾಲಿಗೆಯ ತೇವ ಆರಿತು. ಹೀಗಾಗಿ ನೆಲದ ಮೇಲೆ ಅವಳು ಪ್ಲಾಸ್ಟಿಕ್ ಕವರನ್ನು ಇಳಿಸಿ ಮುಂದೇನು ಮಾಡಬೇಕೆಂದು ಯೋಚಿಸುತ್ತಿರುವಾಗಲೇ ಅವಳು ಕರೆಯದಲೇ ಆಟೊವೊಂದು ಬಂದು ಅವಳ ಪಕ್ಕದಲ್ಲಿ ಗಕ್ಕನೆ ನಿಂತಿತು. ಮುಂದೇನೂ ದಾರಿ ಕಾಣದೆ ಆ ಲಗೇಜನ್ನು ಎತ್ತಿ ಹಾಕಲು ಅವಳು ಹೆಣಗಾಡುತ್ತಿದ್ದರೆ ಡ್ರೈವರನೇ ಕೆಳಗಿಳಿದು ಬಂದು ಅವಳ ಲಗೇಜನ್ನು ಆಟೊದೊಳಗೆ ಹಾಕಿ ಅವಳನ್ನು ಕೂಡ ಹತ್ತಿಸಿಕೊಂಡ.